## ನೀರಾವರಿ ಪ್ರದೇಶಕ್ಕೆ ಸುಧಾರಿತ ಬೇಸಾಯ ಪದ್ಧತಿ

| | |
|---|---|
| ಅಂತರ | (150+90) x 60 ಸೆಂ.ಮೀ. |
| ಕೊಟ್ಟಿಗೆ ಗೊಬ್ಬರ | 25 ಮೆ.ಟನ್/ಹೆಕ್ಟೇರ್/ವರ್ಷಕ್ಕೆ |
| ರಸಗೊಬ್ಬರ (ಸಾ:ರಂ:ಪೊ) | 350:140:100 ಕೆ.ಜಿ/ ಹೆಕ್ಟೇರ್/ವರ್ಷಕ್ಕೆ |
| ರಸಗೊಬ್ಬರದ ರೂಪ | ನೇರ ಗೊಬ್ಬರ |
| ನೀರಾವರಿ | 6–7 ದಿನಗಳಿಗೊಮ್ಮೆ 1.5 ಎಕರೆ–ಇಂಚು |
| ವರ್ಷಕ್ಕೆ ಬೆಳೆಗಳ ಸಂಖ್ಯೆ | 5 |

## ಉಪಯೋಗಗಳು

- ಪ್ರೌಢ ಹಂತದ ದ್ವಿತಳಿ ರೇಷ್ಮೆ ಹುಳು ಸಾಕಾಣಿಕೆಗೆ ಸೂಕ್ತ
- ಹೆಚ್ಚಾದ ಬೇರಿನ ಜೀವರಾಶಿ ಹಾಗೂ ತ್ವರಿತ ಅಭಿವೃದ್ಧಿಯಿಂದಾಗಿ ನೀರಿನ ಬಳಕೆಯಲ್ಲಿ ಹೆಚ್ಚಿನ ದಕ್ಷತೆ
- ಪೋಷಕಾಂಶಗಳ ಹೀರುವಿಕೆಯಲ್ಲೂ ದಕ್ಷತೆ
- ಕೀಟ ಪೀಡೆ ಮತ್ತು ರೋಗಗಳಿಗೆ ಮಧ್ಯಮ ಸಹಿಷ್ಣುತೆ
- ಈ ತಳಿಯು ಮರಗಳನ್ನಾಗಿ ಬೆಳೆಸಲು ಸಹ ಸೂಕ್ತ

ಕೇಂದ್ರ ರೇಷ್ಮೆ ಮಂಡಳಿಯು ವಿಸ್ತಾರವಾದ ಮೌಲ್ಯಮಾಪನ ಪ್ರಯೋಗಗಳನ್ನು ನಡೆಸಿದ ನಂತರ ಜಿ–4 ತಳಿಯು ಹೆಚ್ಚು ಉತ್ಪಾದಕ ಹಿಪ್ಪುನೇರಳೆ ತಳಿ ಎಂದು ಮನಗಂಡು ದಕ್ಷಿಣ ವಲಯದ ರೈತರಿಗೆ ಶಿಫಾರಸ್ಸು ಮಾಡಿರುತ್ತದೆ. ಈ ನಿಟ್ಟಿನಲ್ಲಿ ಸಿ.ಎಸ್.ಆರ್.ಟಿ.ಐ., ಮೈಸೂರಿನಲ್ಲಿ ಜಿ–4 ತಳಿಯ ಬಿತ್ತನೆ ತೋಟಗಳನ್ನು ಸ್ಥಾಪಿಸಲಾಗಿದ್ದು ದಕ್ಷಿಣ ಭಾರತದ ರೇಷ್ಮೆ ಬೆಳೆಗಾರರಿಗೆ ಸರಬರಾಜು ಮಾಡಲು ಸಜ್ಜಾಗಿದೆ.






ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ನಿರ್ದೇಶಕರು
ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಮಾನಂದವಾಡಿ ರಸ್ತೆ
ಶ್ರೀರಾಂಪುರ, ಮೈಸೂರು – 570008
ಫೋನ್: 0821–2362757, 2362406
ಫ್ಯಾಕ್ಸ್ : 0821–2362845
email: cstrimys.csb@nic.in    www.csrtimys.res.in


# ಜಿ4
## ಸುಧಾರಿತ ಹಿಪ್ಪುನೇರಳೆ ತಳಿ




ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ
ISO 9001: 2015 ಪ್ರಮಾಣೀಕೃತ
ಕೇಂದ್ರ ರೇಷ್ಮೆ ಮಂಡಳಿ, ಜವಳಿ ಸಚಿವಾಲಯ
ಭಾರತ ಸರ್ಕಾರ, ಶ್ರೀರಾಂಪುರ
ಮೈಸೂರು – 570008


Copies: 1000    February 2018    Design & Layout: J. Justin Kumar

# ಜಿ4 – ಸುಧಾರಿತ ಹಿಪ್ಪುನೇರಳೆ ತಳಿ

ಜಿ4 ಒಂದು ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ತಳಿಯಾಗಿದ್ದು ನೀರಾವರಿ ಮತ್ತು ಶಿಫಾರಸ್ಸು ಮಾಡಿರುವ ಪದ್ಧತಿಯಲ್ಲಿ ಒಂದು ವರ್ಷಕ್ಕೆ ಒಂದು ಹೆಕ್ಟೇರ್‌ಗೆ 65 ಮೆ.ಟನ್ ಇಳುವರಿ ನೀಡುತ್ತದೆ. ಇದನ್ನು ಮೈಸೂರಿನ ಸಿಎಸ್‌ಆರ್‌ಟಿಐ ಸಂಸ್ಥೆಯಲ್ಲಿ ಮೋರಸ್ ಮಲ್ಟಿಕಾಲಿಸ್ ಮತ್ತು ಎಸ್–13 ತಳಿಗಳ ಸಂಕರಣದಿಂದ ಅಭಿವೃದ್ಧಿಪಡಿಸಲಾಗಿದೆ. ಇದು ಈಗ ಪ್ರಚಲಿತ ವಿ–1 ತಳಿಗೆ ಎಲ್ಲಾ ವಿಧದಲ್ಲೂ ಸಮಾನವಾಗಿದೆ. ಜಿ–4 ತಳಿಯ ಸೊಪ್ಪು ಉತ್ತಮ ಗುಣಮಟ್ಟದಿಂದ ಕೂಡಿದ್ದು ಪ್ರೌಢ ಹಂತದ ರೇಷ್ಮೆ ಹುಳು ಸಾಕಾಣಿಕೆಗೆ ಸೂಕ್ತವಾಗಿದೆ. ಈ ತಳಿಯ ಮೂಲ ಲಕ್ಷಣಗಳೆಂದರೆ ನೇರವಾದ ರೆಂಬೆಗಳು, ಮಂದವಾದ ದಟ್ಟ ಹಸಿರು ಬಣ್ಣದ ಎಲೆಗಳು ಮತ್ತು ಗಿಣ್ಣುಗಳ ನಡುವಿನ ಕಡಿಮೆ ಅಂತರ. ಇದೊಂದು ಜೋಡಿ ವರ್ಣತಂತುವಿನ (ಡಿಪ್ಲಾಯ್ಡ್) ತಳಿಯಾಗಿದ್ದು (2ಎನ್=28) ಹೆಚ್ಚಿನ ಬೇರು ಬಿಡುವಿಕೆ ಸಾಮರ್ಥ್ಯ (>90%) ಹೊಂದಿದೆ.

ಈ ತಳಿಯು ಸುಧಾರಿತ ಬೇಸಾಯ ಪದ್ಧತಿಯನುಸಾರ (150+90) x 60 ಸೆಂ.ಮೀ. ಅಂತರದಲ್ಲಿ 5 ಬೆಳೆ ಷೆಡ್ಯೂಲ್ ನಂತೆ ಖಚಿತ ನೀರಾವರಿಯೊಂದಿಗೆ ವರ್ಷಕ್ಕೆ ಹೆಕ್ಟೇರ್‌ಗೆ 350:140:100 ಕೆ.ಜಿ. ಸಾರಜನಕ, ರಂಜಕ, ಪೊಟ್ಯಾಷ್ ನೀಡಿದಲ್ಲಿ 65 ಮೆ.ಟನ್ ಸೊಪ್ಪನ್ನು ಉತ್ಪಾದಿಸುತ್ತದೆ.

ಎಲೆಗಳು ವಿಸ್ತಾರವಾಗಿ (280 ಚದರ ಸೆ.ಮೀ.) ಹೃದಯಾಕಾರಲ್ಲಿದ್ದು ನಯವಾದ ಹೊಳಪುಳ್ಳ ಮೇಲ್ಮೈ ಮತ್ತು ಗಾಢ ಹಸಿರು ಬಣ್ಣ ಹೊಂದಿದೆ. ಈ ತಳಿಯು ಎಲೆಗೆ ತಗಲುವ ಪ್ರಮುಖ ರೋಗಗಳಾದ ಎಲೆ ತುಕ್ಕು ಮತ್ತು ಎಲೆ ಚುಕ್ಕೆ ರೋಗಗಳಿಗೆ ನಿರೋಧಕ ಶಕ್ತಿಯನ್ನು ಹೊಂದಿದೆ.



## ತಳಿಯ ಬಗ್ಗೆ ವಿವರಣೆ

| | ಜಿ4 | ವಿ1 |
|---|---|---|
| ಸೊಪ್ಪಿನ ಇಳುವರಿ (ಮೆ.ಟನ್/ಹೆ/ವರ್ಷ) | 65 | 61.7 |
| ರೆಂಬೆಗಳ ಸಂಖ್ಯೆ 1 ಗಿಡಕ್ಕೆ | 10–12 | 10–12 |
| ರೆಂಬೆಗಳ ಉದ್ದ (ಸೆಂ.ಮೀ) | 120 | 280 |
| ಗಿಣ್ಣುಗಳ ನಡುವಿನ ಅಂತರ (ಸೆಂ.ಮೀ) | 3.9 ಸೆಂ.ಮೀ. | 5.2 ಸೆಂ.ಮೀ. |
| ಎಲೆಯ ವಿಸ್ತೀರ್ಣ (ಚ.ಸೆಂ.ಮೀ) | 280 | 290 |
| ಉದ್ದ (ಸೆಂ.ಮೀ) | 19–21 | 20–23 |
| ಅಗಲ (ಸೆಂ.ಮೀ) | 15–17 | 13–15 |
| ಎಲೆಯ ಮಂದತೆ | 155–160 | 160–175 |
| ಎಲೆಯ ಆಕಾರ | ಪೂರ್ಣ, ಹೃದಯಾಕಾರ | ಪೂರ್ಣ, ಅಂಡಾಕಾರ |
| ಎಲೆಯ ಮೇಲ್ಮೈ | ನಯವಾದ, ಹೊಳಪು | ನಯವಾದ, ಹೊಳಪು |
| 100 ಎಲೆಗಳ ತೂಕ (ಗ್ರಾಂ) | 416–425 | 530–560 |
| ರೋಗಗಳಿಗೆ ನಿರೋಧಕತೆ | ಎಲೆ ಚುಕ್ಕೆಗೆ ಮಧ್ಯಮ ನಿರೋಧಕತೆ, ತುಕ್ಕು ರೋಗಕ್ಕೆ ನಿರೋಧಕತೆ | ಬೆಂಕಿ ರೋಗಕ್ಕೆ ಮಧ್ಯಮ ನಿರೋಧಕತೆ ಚುಕ್ಕೆ ರೋಗಕ್ಕೆ ಸಹಿಷ್ಣುತೆ |
| ಪುನಶ್ಚೇತನ(ಕಟಾವಾದ ನಂತರದ ದಿನಗಳು) | 11–13 (ಚಳಿಗಾಲ) 9–10 ದಿನಗಳು | 12–14 (ಚಳಿಗಾಲ) 10–11 ದಿನಗಳು |
| ಕಣ್ಣು ಚಿಗುರುವಿಕೆ (30 ನೇ ದಿನಕ್ಕೆ) | 96% | 90% |
| ಬೇರೂರುವಿಕೆ (90 ನೇ ದಿನಕ್ಕೆ) | 92% | 94% |



## ಎಲೆಯ ಗುಣಮಟ್ಟದ ಅಂಶಗಳು

| ಅಂಶಗಳು (%) | ಜಿ4 | ವಿ1 |
|---|---|---|
| ಸಾರಜನಕ | 3.94 | 3.98 |
| ರಂಜಕ | 0.375 | 0.333 |
| ಪೊಟ್ಯಾಷ್ | 1.64 | 1.79 |
| ಕಚ್ಚಾ ಪ್ರೋಟೀನ್ | 24.63 | 24.88 |
| ಒಟ್ಟು ಸಕ್ಕರೆ ಅಂಶ | 16.34 | 16.48 |
| ತೇವಾಂಶ | 75.3 | 75.8 |
| ತೇವಾಂಶ ಹಿಡಿದಿಟ್ಟುಕೊಳ್ಳುವಿಕೆ (ಕಟಾವಿನ 6 ಗಂಟೆಗಳ ನಂತರ) | 78.6 | 80.2 |

## ಹುಳು ಸಾಕಾಣಿಕಾ ಕ್ಷಮತೆ

| ಅಂಶಗಳು (%) | ಜಿ4 | ವಿ1 |
|---|---|---|
| ಇ.ಆರ್.ಆರ್ (10000 ಹುಳುಗಳಿಗೆ) | 9722 | 9688 |
| ಇ.ಆರ್.ಆರ್ (ಕೆ.ಜಿ) | 18.40 | 18.81 |
| ಗೂಡಿನ ತೂಕ (ಗ್ರಾಂ) | 1.93 | 1.95 |
| ಕವಚದ ತೂಕ (ಗ್ರಾಂ) | 0.478 | 0.477 |
| ಶೇಕಡಾವಾರು ಕವಚ | 24.44 | 24.40 |

